ಪಿಡಬ್ಲ್ಯೂಃ 4

ಇಂದು ದಿನಾಂಕಃ 01.08.2018 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟಿ ಸವಾಲುಃ** ಜೆ.ಡಿ.ಆರ್ ಪರ ಶ್ರೀ ಕೆ.ಸಿ.ಸಿ ವಕೀಲರಿಂದಃ

3. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಸಲ್ಲಿಸಲು ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಗಳು ನನಗೆ ಈಗ ಸಂಪೂರ್ಣವಾಗಿ ನೆನಪಿಲ್ಲ. ಚೌಡಪ್ಪ ದುರುಗಪ್ಪ ಯಡಗೋಡಿರವರು ಯಾವಾಗ ಮರಣ ಹೊಂದಿದರು ಎಂದು ನನಗೆ ಸ್ಪಷ್ಟವಾಗಿ ಹೇಳಲು ಬರುವುದಿಲ್ಲ. ಸದರಿಯವರು ಸುಮಾರು 10 ವರ್ಷದ ಹಿಂದೆ ಮರಣ ಹೊಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಜೆ.ಡಿ.ಆರ್ 2(ಡಿ) ರವರು ಊರಿನಲ್ಲಿ ಇಲ್ಲ. ಸಾಕ್ಷಿಯು ವಿಧ್ಯಾಭ್ಯಾಸ ಮಾಡಲು ಹೋಗಿದ್ದಾರೆ ಎಂದು ನುಡಿಯುತ್ತಾರೆ. ಸದರಿಯವರು ಬೆಂಗಳೂರಿಗೆ ಸುಮಾರು 10 ವರ್ಷದ ಹಿಂದೆ ಕೆಲಸಕ್ಕೆ ಹೋಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

4. ತಂತಿಬೇಲಿ ಮೊದಲಿನಿಂದಲೂ ಇದೆ ಎಂದರೆ ಸರಿಯಲ್ಲ. ಸದರಿ ತಂತಿಬೇಲಿ 4 ವರೆ ಯಿಂದ 5 ವರ್ಷದಿಂದ ಇದೆ. ತಂತಿಬೇಲಿಯು ಸುಮಾರು 2000 ನೇ ಇಸ್ವಿಯಿಂದ ಇದೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಸಂಗತಿಗಳು ಗೊತ್ತಿಲ್ಲದಿದ್ದರೂ ಸಹ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಸಹಿ/-

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.